ಸೋಂಕೂ ಇಲ್ಲದ ಟೀವಿ ಸುದ್ದಿ ವಾಚಕಿಯ ನಿರ್ಭಾವುಕತೆ ಇತ್ತು. 'ಬಹುಶಃ ಮೊದಲೇ ತುಂಬ ತಯಾರಿ ನಡೆಸಿದ್ದಿರಬೇಕು. ಒಂದೊಂದು ಸಾಲು, ಶಬ್ದ, ಮೌನ, ನಿಟ್ಟುಸಿರು ಎಲ್ಲವನ್ನೂ ಮತ್ತೆ ಮತ್ತೆ ಆಡಿ ರೂಢಿಸಿಕೊಂಡಿರಬೇಕು. ಅದಕ್ಕೇ ಈಗವಳ ಮುಖದಲ್ಲಿ ಎಲ್ಲವನ್ನೂ ಸರಿಯಾಗಿ ಒಪ್ಪಿಸಿದ ವಿಧೇಯ ವಿದ್ಯಾರ್ಥಿಯ ಸಮಾಧಾನವಷ್ಟೇ ಕಾಣುತ್ತಿದೆ'.

ಸದಾಶಿವ ಈ ಕ್ಷಣದಲ್ಲಿ ತನಗೇನನಿಸುತ್ತಿದದೆ ಎಂದು ಯೋಚಿಸಿದ. ಮನಸ್ಸು ಖಾಲಿಯಗಿತ್ತು. ಆಘಾತವಾಗಬೇಕಿತ್ತು. ಆಗಲಿಲ್ಲ. ದುಃಖವಾಗಬೇಕಿತ್ತು. ಆಗುತ್ತಿಲ್ಲ. ಅವಳ ಕೈಹಿಡಿದು ಅಂಗಲಾಚಬೇಕಿತ್ತು. ಯಾಕೋ ಬೇಕೆನಿಸುತ್ತಿಲ್ಲ. 'ನಾನೂ ಆಳದಲ್ಲೆಲ್ಲೋ ಇದನ್ನೇ ಬಯಸುತ್ತಿದ್ದಿದ್ದೆನಾ?...'

ಸದಾ ಥಟ್ಟನೇ 'ಎಲ್ಲಿಗೆ ಬಿಡಲಿ ನಿನ್ನ? ಮೆಜೆಸ್ಟಿಕ್ಕಾ?' ಕೇಳಿದ್ದ. ಸ್ವಾತಿ ಅರೆಗಳಿಗೆ ಅವನನ್ನು ದುರುಗುಟ್ಟಿಕೊಂಡು ನೋಡಿ 'ನಾನು ಆಟೊದಲ್ಲಿ ಹೋಗ್ತೇನೆ' ಎಂದು ಕಾಲಪ್ಪಳಿಸಿಕೊಂಡು ಹೋಗಿದ್ದಳು. ಸದಾ ನಿರಾಳ ಉಸಿರೆಳೆದುಕೊಂಡು ಅದೇ ಕಟ್ಟೆ ಮೇಲೆ ಕುಳಿತುಕೊಂಡು ಸ್ವಾತಿಯ ಮಾತುಗಳನ್ನೆಲ್ಲ ಮತ್ತೆ ಮೆಲುಕು ಹಾಕಿದ.

'ನಾನು ಕಾಯ್ತೆನೆ' ಎಂದು ಮಾತಿನ ಮಧ್ಯ ಹೇಳಿದ್ದರೂ ಸ್ವಾತಿ ತನಗಾಗಿ ಕಾಯಲಾರಳು ಎಂದು ಅವನ ಮನಸ್ಸಿಗೆ ಖಾತ್ರಿಯಾಗಿಬಿಟ್ಟಿತ್ತು. ಸ್ವಾತಿಯ ಮಾತಿನಿಂದಾದ ಅವಮಾನವೂ ಅವನನ್ನು ಅಷ್ಟಾಗಿ ಕಾಡಲಿಲ್ಲ. ಆದರೆ ಒಬ್ಬಳು ಹುಡುಗಿಗೆ ತಾನು ಇಷ್ಟು ವರ್ಷ ಪ್ರೀತಿಸಿದ್ದ ಹುಡುಗನನ್ನು ತಿರಸ್ಕರಿಸಲು ಅವನ ಸಂಪಾದನೆಯೇ ಮೂಲ ಕಾರಣವಾಗಬಲ್ಲದು ಎಂಬುದೇ ವಿಚಿತ್ರವಾಗಿ ಕಂಡಿತ್ತು. ಹಣ ಆಸ್ತಿಯೇ ಮುಖ್ಯವಾಗಿದ್ದರೆ ಸ್ವಾತಿ ತನ್ನನ್ನು ಸುಲಭವಾಗಿ ಒಪ್ಪಿಕೊಂಡುಬಿಡ್ತಿದ್ದಳು. ನಮ್ಮ ಮನೆಯಲ್ಲಿ ಬೇಕಾದಷ್ಟು ಆಸ್ತಿ ಇದೆ ಎನ್ನುವುದು ಅವಳಿಗೂ ಚೆನ್ನಾಗಿಯೇ ಗೊತ್ತು. ಈ ಎಲ್ಲವನ್ನೂ ಮೀರಿದ ಯಾವ ಆಯಾಮ ಸ್ವಾತಿಯನ್ನು ನಿರ್ದೇಶಿಸುತ್ತಿದೆ ಎನ್ನುವುದನ್ನೇ ಅವನು ತಿಳಿಯದಾದ. ನೂರಾರು ಕ್ವಿಂಟಲ್ ಅಡಿಕೆ ಮಾಡುವ, ಅಡಿಕೆ ಮಂಡಿ ವ್ಯವಹಾರವೂ ಇರುವ ದೊಡ್ಡ ಹೆಗಡೇರ ಮನೆಯ ಒಬ್ಬನೇ ಮಗನಿಗೆ ಬೆಂಗಳೂರಿನಲ್ಲಿ ಇಪ್ಪತ್ತು ಸಾವಿರ ಸಂಬಳದ ನೌಕರಿ ಹಿಡಿ. ಇಲ್ಲೆ ಮನೆ ಮಾಡುವಾ ಎನ್ನುವ ಸ್ವಾತಿಯ ಮನಸ್ಥಿತಿಯೇ ಅವನಿಗೆ ಅರ್ಥವಾಗಲಿಲ್ಲ. 'ಅಥವಾ ಅವಳಿಗೆ ನನ್ನಿಂದ ತಪ್ಪಿಸಿಕೊಳ್ಳಲು ಇದು ಒಂದು ನೆಪ ಮಾತ್ರ ಆಗಿರಬಹುದಾ?'

ನಾವು ಇದೆ ಎಂದು ಭಾವಿಸಿಕೊಂಡು ಪರಸ್ಪರ ತೊಡಗಿಕೊಳ್ಳುತ್ತಿದ್ದ ಇಬ್ಬರ ನಡುವಿನ ಯಾವುದೋ ತಂತು ಬಹಳ ಹಿಂದೆಯೇ ಕಳಚಿಕೊಂಡಿದೆ. ಆ ಭ್ರಮೆ ಒಡೆದ ಕೂಡಲೇ ವಿಚಿತ್ರ ನಿರಾಳ ಭಾವ ತನ್ನಲ್ಲೂ ಆವರಿಸಿದೆ ಎಂಬುದನ್ನು ಗುರ್ತಿಸುತ್ತಿದ್ದಂತೆಯೆ ಸದಾ ಅವನಷ್ಟಕ್ಕೆ ಸೋಜಿಗಗೊಂಡ.

ಸ್ವಲ್ಪ ದಿನಗಳ ಹಿಂದೆ ನಡೆದ ಶ್ರಾವಂತಿಯ ಪ್ರಸಂಗದತ್ತ ಅವನ ಮನಸ್ಸು ಹೊರಳಿತು. ಅದರಿಂದಲೇ ಅವರಿಬ್ಬರ ನಡುವೆ ಮೊದಲು ಬಿರುಕು ಮೂಡಿದ್ದು. ಶ್ರಾವಂತಿಯಿದ್ದಲ್ಲಿಗೆ ಸದಾಶಿವನನ್ನು ಕರೆದುಕೊಂಡು ಹೋದದ್ದು ವಿಪಿನ್. ಬೆಂಗಳೂರಿಗೆ ಬಂದ ಹೊಸತರಲ್ಲಿ ಗುಟ್ಟಹಳ್ಳಿಯ ಪಿ.ಜಿಯಲ್ಲಿ ಸದಾನ ರೂಮ್‌ಮೇಟ್ ಆಗಿದ್ದವ. ಖಾಲಿಯಿದ್ದ ಮೇಲಿನ ಕಾಟನ್ನು ಹತ್ತಲು ಸದಾ ಅನುಮಾನಿಸುತ್ತಾ ನಿಂತಾಗ ಕೆಳಗಿನ ಕಾಟ್ ಬಿಟ್ಟುಕೊಟ್ಟು ಸಲೀಸಾಗಿ ಮೇಲೇರಿ ಲಕ್ಷ್ಮೀನಾರಾಯಣನ ಹಾಗೆ ತಲೆಗೆ ಕೈಕೊಟ್ಟು ಮಲಗಿ ಆಪ್ತವಾಗಿ ನಕ್ಕವ. ಪಶ್ಚಿಮ ಬಂಗಾಳದ ಯಾವುದೋ ವಿಚಿತ್ರ ಹೆಸರಿನ ಊರಿನವನಾದ ವಿಪಿನ್, ಬೆಂಗಳೂರಿಗೆ ಎಂಜಿನಿಯರಿಂಗ್